ಶ್ರೀ ಸಿ.ಬಿ.ಸುರೇಶ್‌ಬಾಬು:– ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಗಳು, ಸ್ಕೂಲ್ ಗಳಲ್ಲಿ ಕಂಬಳಿಗಳನ್ನು purchase ಮಾಡಿದರೆ ಒಳ್ಳೆಯದು.

ಅಧ್ಯಕ್ಷರು:– ಶಾಸಕರುಗಳು ಕೂಡ ಕಂಬಳಿಗಳನ್ನು ಉಪಯೋಗಿಸ ಬೇಕು.

ಶ್ರೀ ಸಿ.ಬಿ ಸುರೇಶ್‌ಬಾಬು:– ಖಂಡಿತ, ನಾವು ಹೊದ್ದುಕೊಳ್ಳುವುದೇ ಅದು ದಯಮಾಡಿ ನೀವು ಅದನೇ ನಮಗೆ ಕೊಡಿಸಿ.

ಅಧ್ಯಕ್ಷರು:– ಕಡ್ಡಾಯವಾಗಿ ಪ್ರತಿಯೊಬ್ಬ ಮಾನ್ಯ ಸದಸ್ಯರುಗಳಿಗೆ ಎರಡೆರಡು ಕಂಬಳಿಗಳನ್ನು ಪೂರೈಕೆ ಮಾಡಿಸೋಣ. ನೋಡಿ ಈಗಲೇ ನಮ್ಮ ಸೆಕ್ರೆಟರಿಯವರಿಗೆ ಹೇಳುತ್ತಿದ್ದೇನೆ, ಎಷ್ಟು ಕಂಬಳಿ ಬೇಕಾದರು. ಶಾಸಕರಿಗಾಗಿ ಕೊಡಲಿ, ಈಗ 1000 ಕಂಬಳಿಗಳನ್ನು ಕೊಡಲು ಕ್ರಮ ತೆಗೆದುಕೊಳ್ಳಿ. ನೋಡಿ ಸುರೇಶ್‌ರವರೆ, ಒಂದು ಸಾವಿರ ಕಂಬಳಿಗಳನ್ನು ಶಾಸಕರಿಗಾಗಿ ಕೊಡಿಸುತ್ತೇನೆ. ಈಗ ಕುಳಿತುಕೊಳ್ಳಿ. ಈಗ ಉಮೇಶ್ ವಿ. ಕತ್ತಿಯವರ ಪ್ರಶ್ನೆ

Supply of RTC

10(145) ಶ್ರೀ. ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಂದಾಯ ಇಲಾಖೆಯವರಿಂದ ಗಣಕ ಯಂತ್ರ ಮುಖಾಂತರ ವಿತರಿಸುವ ಪಹಣಿ ಪತ್ರಿಕೆಯ ಲೋಪದೋಷಗಳನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಆ) ರೈತರು ಪಹಣಿ ಪತ್ರಿಕೆಯನ್ನು ಸರ್ಕಾರಿ ಕೇಂದ್ರದಿಂದ ಹಾಗೂ ಖಾಸಗಿಯವರಿಂದ ಪಡೆಯುತ್ತಿರುವ ಪ್ರತಿಶತ ಎಷ್ಟು?

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಪಹಣಿಗಳು ಮೂಲ ಆಕಾರ್ ಬಂದ್‌ನಲ್ಲಿರುವ ವಿವರಗಳಿಗೆ (ವಿಸ್ತೀರ್ಣ, ಖರಾಬು ವಿವರ, ಕಾಲಂ 3 ಮತ್ತು 9 ರ ವ್ಯತ್ಯಾಸ

ಇತ್ಯಾದಿ) ಹೊಂದಾಣಿಯಲ್ಲಿನ ಖಾತೆದಾರರ ಹೆಸರುಗಳಲ್ಲಿ ಹಾಗೂ ಪಹಣಿ ಕಾಲಂ 9 ಮತ್ತು 12 ರ ವ್ಯತ್ಯಾಸಗಳು ಇರುವುದನ್ನು ನಿವಾರಿಸಲು ಸರ್ಕಾರವು ನಿವೃತ ಕಂದಾಯ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೇರೆಗೆ ಪಡದು ವಿಶೇಷ ಆಂಧೋಲನವನ್ನು ಪ್ರಾಯೋಗಿಕವಾಗಿ ತುಮಕೂರು ಮತ್ತು ಕೋಲಾರ ತಾಲ್ಲೂಕುಗಳಲ್ಲಿ ಕೈಗೊಂಡಿರುತ್ತದೆ ಈ ಆಂದೋಲನದ ಸಾಧಕ–ಭಾದಕಗಳನ್ನು ಅರಿತು ಪಹಣಿ ತಿದ್ದುಪಡಿಯನ್ನು ರಾಜ್ಯಾದ್ಯಾಂತ ಕೈಗೊಳ್ಳಲಾಗುವುದು RTCs are not tallying with the base record Akarband (Extent, Kharab, difference in Col 3 & 9, etc) Apart from this, the Khatadhar names, difference in Col 9 & 12 also exist in RTCs Goverenment has taken up special drive in Tumakur & kolar Taluks to correct these mistakes by hiring retired Revenue officials The same exercise will be carried out throughout the state after learning the pros and cons from the present drive

ಆ) ರಾಜ್ಯದಲ್ಲಿ ಜನವರಿ 2013 ರಿಂದ ಸೆಪ್ಟಂಬರ್ 2013 ರವರೆಗೆ ಸರ್ಕಾರಿ ಪಹಣಿ ಕೇಂದ್ರಗಳಲ್ಲಿ 201971764 (97.41%) ಪಹಣಿಗಳನ್ನು ಮತ್ತು 29 ಖಾಸಗಿ ಪಹಣಿ ಕೇಂದ್ರಗಳಲ್ಲಿ 543278 (2 59%) ಪಹಣಿಗಳನ್ನು ವಿತರಿಸಲಾಗಿರುತ್ತದೆ.

20971764 (97 41%) RTCs have been issued from the Govrenment kiosks and 543278(2 59%) have been issued from the private kiosks from January 2013 to September 2013

ಶ್ರೀ ಉಮೇಶ್ ವಿ. ಕತ್ತಿ:–ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ಗಣಕ ಯಂತ್ರಗಳ ಮೂಲಕ ಪಹಣಿ ವಿತರಣೆಯನ್ನು ಮಾಡುತ್ತಿದ್ದಾರೆ. ಈ ಪಹಣಿಗಳಲ್ಲಿ ಕೆಲವುದರಲ್ಲಿ ಹೆಸರುಗಳನ್ನು ಕೈಬಿಟ್ಟುಹೋಗಿವೆ, ಕೆಲವುದರಲ್ಲಿ ಎಕರೆ ಗಟ್ಟಲೆ ಜಮೀನುಗಳು ಬಿಟ್ಟಹೋಗಿವೆ.

ಅಧ್ಯಕ್ಷರು:– ಹೌದೌದು, ಇದು ನಿಜ.

ಶ್ರೀ ಉಮೇಶ್ ವಿ ಕತ್ತಿ:– ಇವೆಲ್ಲಾ ತೊಂದರೆಗಳನ್ನು ಕಳೆದ ಮೂರು ವರ್ಷಗಳಿಂದಲೂ ತಿದ್ದುತ್ತಿಲ್ಲ. ಇಲ್ಲಿಂದ ತಿದ್ದುಪಡಿಯಾಗಿ ಡಿ.ಸಿ.ಗೆ ಕಳುಹಿಸಿರುತ್ತಾರೆ. ಡಿ.ಸಿ. ಆಫೀಸ್‌ರವರನ್ನು ಕೇಳಿದರೆ ನಾವು ಎಲ್ಲವನ್ನೂ ತಿದ್ದಿಕಳುಹಿಸಿದ್ದೇವೆ, ಈಗ ಅಂತಿಮವಾಗಿ ಬೆಂಗಳೂರಿನಲ್ಲಿ ತಿದ್ದುಪಡಿಯಾಗಬೇಕೆಂದು ಹೇಳುತ್ತಾರೆ. ಅದು ಯಾವುದೋ ಕಮಿಟಿಗಳ ಬಗ್ಗೆ ಹೇಳುತ್ತಾರೆ. ನಿವೃತ್ತಿಯಾದಂಥ ಕಂದಾಯ ಇಲಾಖೆಯ ಅಧಿಕಾರಿಗಳನ್ನು ನೇಮಕಾತಿ ಮಾಡಿ ತಿದ್ದುಪಡಿಮಾಡಲು ಎರಡು ಜಿಲ್ಲೆಗಳಲ್ಲಿ ಮಾಡುತ್ತಿದ್ದೀರಿ. ಆದರೆ ಬೆಳಗಾಂ ಜಿಲ್ಲೆ ದೊಡ್ಡ ಜಿಲ್ಲೆ. ಕಳೆದ ಮೂರು ವರ್ಷಗಳಿಂದ ತೊಂದರೆಯಾಗಿರುವಂಥ ಪಹಣೆಗಳನ್ನು ತಿದ್ದುಪಡಿ ಮಾಡವುದಕ್ಕೆ ರೈತರು ತಹಸೀಲ್ದಾರ್ ಆಫೀಸ್ ಮತ್ತು ಡಿ.ಸಿ. ಆಫೀಸ್‌ಗಳಿಗೆ ತಿರುಗಿ ಸಾಕಾಗಿಹೋಗಿದ್ದಾರೆ. ನೀವು ಇದನ್ನೇನಾದರು ಸರಿಮಾಡುತ್ತೀರಾ ಎಂಬ ಬಗ್ಗೆ ಹೇಳಬೇಕು. ಬೆಂಗಳೂರು ಬಿಡಿಸಿ ಏನಾದರೂ ಒಂದು ಡಿವಿಷನ್ ಮಾಡಿ ಜಿಲ್ಲಾವಾರು ಪಹಣೆಗಳನ್ನು ತಿದ್ದುಪಡಿ ಮಾಡುವುದಕ್ಕೆ ಅಧಿಕಾರವನ್ನು ಕೊಡುತ್ತೀರಾ ಎಂಬ ಬಗ್ಗೆ ಹೇಳಬೇಕು. ಈಗ ಬೆಂಗಳೂರಿನಲ್ಲಿ ತಿದ್ದುಪಡಿ ಮಾಡುವುದನ್ನು ಇಟ್ಟುಕೊಂಡಿದ್ದೀರಿ. ಅಲ್ಲಿ ತಿದ್ದುಪಡಿ ಆಗುವುದಕ್ಕೆ ಇನ್ನೂ ಎಷ್ಟು ದಿವಸ ಬೇಕು? ಈಗಾಗಲೇ ಮೂರು ವರ್ಷವಾಗಿದೆ. ಇಲ್ಲಿಂದ ಈಗಾಗಲೇ ತಿದ್ದುಪಡಿಯಾಗಿ ಹೋಗಿರುವುದಕ್ಕೆ ಬೆಂಗಳೂರಿನಿಂದ ಇಲ್ಲಿಯವರೆಗೂ ಅದಕ್ಕೆ ರಿಪ್ಲೈ ಆಗಿಲ್ಲ. ಇನ್ನು ಎರಡೆನೆಯದಾಗಿ ಇಡೀ ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು ವಾಜಪೇಯಿಯವರ ಹೆಸರಿನಲ್ಲಿ ತೆಗೆದಂಥ ಕೇಂದ್ರಗಳೇನಿವೆ ಇದು ಪ್ರೈವೇಟ್ ಸೆಕ್ಟರ್‌ನಲ್ಲಿ ನನ್ನ ತಾಲ್ಲೂಕಿನಲ್ಲಿ ಎರಡು ಇದೆ. 50 ರೂ.ಗಳ ಚಾರ್ಜ್ ಮಾಡಿ. ರಾತ್ರಿ 12–30 ವರೆಗೂ ಕೊಡುತ್ತಿದ್ದಾರೆ. ಒಂದು ದಿವಸಕ್ಕೆ 250 ಪಹಣೆಗಳನ್ನು ಕೊಡುತ್ತಿದ್ದಾರೆ. ಆದರೆ ಸರ್ಕಾರಿ ಕಾರ್ಯಗಾರದಲ್ಲಿ ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಒಂದೈದು, ಹತ್ತು ಪಹಣಿಗಳನ್ನು ಮಾತ್ರ ಕೊಡುವುದಕ್ಕೆ ವ್ಯವಸ್ಥೆಯಿದೆ. ನಿಮ್ಮನ್ನು ಬೇಕಾದರೆ ಕರೆದುಕೊಂಡು ಹೋಗಿ ಸರ್ಕಾರಿ ಕಾರ್ಯಗಾರದಲ್ಲಿ

ಮತ್ತು ಪ್ರೈವೇಟ್ ಸೆಕ್ಟರ್‌ನಲ್ಲಿ ಪಹಣಿ ಕೆಲಸ ಹೇಗೆ ನಡೆಯುತ್ತಿದೆ ಎಂಬುದನ್ನು ತೋರಿಸುತ್ತೇನೆ ನಾನು ಖಾಸಗೀಕರಣ ಮಾಡುತ್ತೀರಾ ಎಂದು ಕೇಳಿದ ಪ್ರಶ್ನೆಯ ಉದ್ದೇಶ ಖಾಸಗೀಕರಣ ಮಾಡಬೇಕು ಎಂದೇನಲ್ಲ ಆದರೆ ಖಾಸಗಿಯವರು ಯಾವ ರೀತಿ ನಡೆಸುತ್ತಾರೆಂದರೆ ಇದೊಂದೇ ಪ್ರೋಗ್ರಾಂ ನಲ್ಲಿ ಅವರು 50 ರೂ.ಗಳನ್ನು ಛಾರ್ಜ್ ಮಾಡಿ ರಾತ್ರಿ 12.00 ಗಂಟೆಯವರೆಗೆ ಪಹಣಿಗಳನ್ನು ಕೊಡುತ್ತಿದ್ದಾರೆ ಆದರೆ ಸರ್ಕಾರಿ ಕಛೇರಿಗಳಲ್ಲಿ ಬೇಳಿಗ್ಗೆ 11.00 ಗಂಟೆಗೆ ತೆಗೆಯುತ್ತಾರೆ ಸಂಜೆ 5.00 ಗಂಟೆಯವರೆಗೆ 8 ರಿಂದ 10 ಪಹಣಿಗಳನ್ನು ಮಾತ್ರ ಒಂದು ಪಹಣಿಗೆ 15 ರೂ.ಗಳನ್ನು ತೆಗೆದುಕೊಂಡು ಕೊಡುತ್ತಿದ್ದಾರೆ.

ಅಧ್ಯಕ್ಷರು: ನೀವು ಕೇಳಿ, ನಾನು ಹೇಳುತ್ತೇನೆ. ಈ ಪಹಣಿ ಬರೆಯುವವರು ಯಾರೆಂದರೆ ವಿಲೇಜ್ ಅಕೌಂಟೆಂಟ್. ಆ ರೀತಿ ಬರೆದದ್ದನ್ನು ಸರಿ ಇದೆಯೋ ಎನ್ನುವುದನ್ನು ನೋಡಿ ಕರೆಕ್ಷನ್ ಮಾಡಿ ಅಪ್ರೂವ್ ಮಾಡುವುದು ತಹಸೀಲ್ದಾರ್. ಅವರು ಮಾಡಿರುವ ತಪ್ಪನ್ನು ಅವರೇ ಸರಿಪಡಿಸಬೇಕೇ ಅಥವಾ ಬೇರೆಯವರು ಮಾಡಬೇಕೆ?

ಶ್ರೀ ಉಮೇಶ್ ವಿ ಕತ್ತಿ:– ಇವರು ಸರಿಪಡಿಸಿ ಬೆಂಗಳೂರಿಗೆ ಕಳುಹಿಸಿದ್ದೇವೆಂದು ಹೇಳುತ್ತಾರೆ

(ಗೊಂದಲ)

ಅಧ್ಯಕ್ಷರು:–ಮಾನ್ಯ ಸಚಿವರು ಉತ್ತರ ಹೇಳಲಿ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಅವರು ಮೂಲಭೂತವಾಗಿ ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಆಮೂರು ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟಿದ್ದೇನೆ. ಈಗ ಮೂಲಭೂತವಾಗಿ ಆ ಮೂರು ಪ್ರಶ್ನೆಗಳನ್ನು ಕೇಳಿರುವ ಉದ್ದೇಶ ಆರ್.ಟಿ.ಸಿ. ಗಳಲ್ಲಿ ಕೈಬರಹ ಗಳಲ್ಲಿ ಏನಿತ್ತೋ ಅದನ್ನು ಗಣಕ ಯಂತ್ರದ ಮೂಲಕ ದಾಖಲಿಸಿ ಕೊಡುವುದು ಎಂದು ಪ್ರಾರಂಭವಾಯಿತೋ ಅಲ್ಲಿಂದ ಈ ಸಮಸ್ಯೆ ಉದ್ಭವವಾಗಿದೆ.

ಬಹಳ ತಪ್ಪುಗಳಾಗುತ್ತಿದೆ, ಟ್ಯಾಲಿ ಆಗುತ್ತಿಲ್ಲ, ಮೂಲ ಆರ್.ಟಿ.ಸಿ. ಯಲ್ಲಿರುವ ದಾಖಲೆಗಳ ವಿವರಗಳು ಗಣಕ ಯಂತ್ರದ ಮೂಲಕ ನೀಡುತ್ತಿರುವ ಪಹಣಿ ಯಲ್ಲಿ ಬರುತ್ತಿಲ್ಲವೆನ್ನುವ ಸಮಸ್ಯೆ ಇಡೀ ರಾಜ್ಯದಲ್ಲಿರುವುದು ತಮಗೂ ಕೂಡ ಗೊತ್ತಿದೆ.

ಅಧ್ಯಕ್ಷರು:– ಈ ಸಮಸ್ಯೆ ಹುಟ್ಟಿದ್ದು ಯಾವಾಗ ಗೊತ್ತೇ?

ಶ್ರೀ ವಿ.ಆರ್.ಶ್ರೀನಿವಾಸ ಪ್ರಸಾದ್:– ಯಾವುದು?

ಅಧ್ಯಕ್ಷರು:– ಈ computer ಎನ್ನುವುದು ಹುಟ್ಟಿದ ಮೇಲೆ ಈ ಸಮಸ್ಯೆ ಹುಟ್ಟಿದ್ದು. ಕಂಪ್ಯೂಟರ್ ಇಲ್ಲದ ಸಮಯದಲ್ಲಿ ಹಿಂದೆ ವಿಲೇಜ್ ಅಕೌಂಟೆಂಟ್ ಕರಾರುವಕ್ಕಾಗಿ ಎಲ್ಲವನ್ನೂ ಬರೆಯುತ್ತಿದ್ದರು. ಅಧಿಕಾರಿಗಳಲ್ಲಿ ಇಲ್ಲೊಬ್ಬರು ಮಹಾ ಪಂಡಿತರಿದ್ದಾರೆ, ಅವರು ಇದನ್ನು introduce ಮಾಡಿ ಹಿಂದಿನ ವ್ಯವಸ್ಥೆಯನ್ನು ಹಾಳುಗೆಡಿಸಿದ್ದು.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:– ಈಗ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಆಲೋಚನೆಯನ್ನು ಮಾಡುತ್ತಿದ್ದೆ. ಇದರಲ್ಲಿ ಏನು ಸಮಸ್ಯೆಯಿದೆ ಎಂದು ಹೇಳುತ್ತೇನೆ.

ಅಧ್ಯಕ್ಷರು : ಬೆಳೆ ಬರೆಯುವುದಿಲ್ಲ, ಏನೂ ಇಲ್ಲ. ಇದನ್ನು ಸರಿಪಡಿಸುವುದು ಹೇಗೆ ಎಂದು ಏನು ಹೇಳುತ್ತೀರಿ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ನೀವು ಬೇಕಾದರೆ ತೆಗೆದು ನೋಡಿ, ಎಲ್ಲಾ computer ನಲ್ಲೂ no crop ಎಂದು ಬರೆಯುತ್ತಾರೆ. ರೈತ ನಿಖರವಾಗಿ ಏನು ಬೆಳೆ ಬೆಳೆಯುತ್ತಾನೆ, ಅದನ್ನು ಪಹಣಿಯಲ್ಲಿ ಬರೆಯುತ್ತಾರೆಯೇ ಎಂದು ನೋಡಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ಅದಕ್ಕೋಸ್ಕರ ಇದನ್ನೆಲ್ಲಾ ಸರಿಪಡಿಸಬೇಕಾಗಿದೆ...

ಅಧ್ಯಕ್ಷರು : ರೇವಣ್ಣನವರೆ, ಅವರು ಏನು ಮಾಡುತ್ತಾರೆ ಎಂದು ಉತ್ತರ ಹೇಳಿಲಿ ಬಿಡಿ. ಮಂತ್ರಿಗಳು ಉತ್ತರ ಹೇಳಿ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಅಧ್ಯಕ್ಷರೆ, ಇದನ್ನು ಸರಿಪಡಿಸುತ್ತೇನೆಂದು ಹೇಳುತ್ತಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಎಕರೆ ಗಟ್ಟಲೆ ವ್ಯತ್ಯಾಸವಾಗುತ್ತಿದೆ

ಅಧ್ಯಕ್ಷರು : ನೀವು ಸರ್ಕಾರ ನಡೆಸಿದಿರಲ್ಲ, ಈಗ ಇದು ನಿಮ್ಮ ಗಮನಕ್ಕೆ ಬಂದಿರಲಿಲ್ಲವೆ?

ಶ್ರೀ ಉಮೇಶ್ ವಿ.ಕತ್ತಿ : ನಾವು ಬಂದಾಗ ಅದನ್ನು ತಿದ್ದುಪಡಿ ಮಾಡುವಂತಹ ಪ್ರಯತ್ನ ಮಾಡಿದೆವು.

(ಗೊಂದಲ)

ಅಧ್ಯಕ್ಷರು : ಉತ್ತರ ಹೇಳಿ.

ಶ್ರೀ ಉಮೇಶ್ ವಿ ಕತ್ತಿ : ಈಗ ಇಲ್ಲಿ ಕುಳಿತು ಪ್ರಶ್ನೆಯನ್ನು ಕೇಳುತ್ತಿದ್ದೇನೆ

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಮಾನ್ಯ ಸದಸ್ಯರು ಹೇಳಿದಂತೆ ಏನು tally ಆಗುತ್ತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ, ಪಹಣಿ ವಿಚಾರದಲ್ಲಿ ಏನು ಕಾರಣವಾಗುತ್ತಿದೆ, ಕಂಪ್ಯೂಟರೀಕರಣ ಆದ ತಕ್ಷಣ ಏನು defect ಆಗಿದೆ, ಇದನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕೆನ್ನುವುದರ ವಿಚಾರದಲ್ಲಿ ನನ್ನ ಇಲಾಖೆಯಲ್ಲಿ ಅಧಿಕಾರಿಗಳಿಗೆ ಒತ್ತಡ ಜಾಸ್ತಿಯಿರುವುದರಿಂದ ಬಹಳ ವೇಗವಾಗಿ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳಿ, ಇದಕ್ಕೆ ನಾವು outsource ನಲ್ಲಿ ಕಂದಾಯ ಇಲಾಖೆಯಲ್ಲಿ ಬೇರೆ retired employees, ಪರಿಣಿತರು ಹಾಗೂ ಅನುಭವವಿರುವವರನ್ನು ತೆಗೆದುಕೊಂಡಿದ್ದೇವೆ ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಜಿಲ್ಲಾಮಟ್ಟದಲ್ಲಿ ಮಾಡಬೇಕೆಂದು ತುಮಕೂರು ಮತ್ತು ಕೋಲಾರ ಜಿಲ್ಲೆಯಲ್ಲಿ ಒಂದು ಪ್ರಾಯೋಗಿಕವಾಗಿ ತೆಗೆದುಕೊಂಡಿದ್ದೇವೆ. ಇನ್ನೇನು ಅದರ ಫಲಿತಾಂಶ ಬರುತ್ತಿದೆ. ಇದಾದಮೇಲೆ ಅದರ ಸಾಧಕ–ಬಾಧಕಗಳನ್ನು ನೋಡಿ, ಇಡೀ ರಾಜ್ಯದಲ್ಲಿ ಇದನ್ನು ತಕ್ಷಣವೇ ಸರಿಪಡಿಸಿ

ಎಲ್ಲರಿಗೂ ಕೂಡ ಸರಿಯಾಗಿ RTC ಸಿಗತಕ್ಕಂಥ ರೀತಿಯಲ್ಲಿ ಕೆಲಸ ಮಾಡುವಂತಹ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ.

ಶ್ರೀ ಲಕ್ಷ್ಮಣ ಸಂಹಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಹಿಂದಿನ ಕಾಲದಲ್ಲಿ ನಾವು ಛಾಪಾ ಕಾಗದವನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದುಕೊಳ್ಳುವುದಕ್ಕೆ ಬೆಳ್ಳಿಗ್ಗೆಯಿಂದ ಸಾಯಂಕಾಲದವರೆಗೂ ಕ್ಯೂ ನಿಂತರೂ ಕೂಡ ಸಿಗುತ್ತಿರಲಿಲ್ಲ. ಈಗ ಹೋಬಳಿ ಮಟ್ಟದಲ್ಲಿ ಇವತ್ತು ನಾವು ನೆಮ್ಮದಿ ಕೇಂದ್ರದ ಮುಖಾಂತರ ಪಡೆದುಕೊಳ್ಳುತ್ತಿದ್ದೇವೆ, ಅದರ ಬಗ್ಗೆ ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಗ್ರಾಮೀಣ ಮಟ್ಟದಲ್ಲಿ ಸಹಕಾರಿ ಸಂಘಗಳೇನಿವೆ, ಯಾವುದು ಕಂಪ್ಯೂಟರೀಕರಣವಾಗಿದೆ, ಅಂಥವು ಗಳಿಗೆ ನೀವು software ಕೊಟ್ಟಿದ್ದಾದರೆ ಅಲ್ಲಿಯೂ ಕೂಡ ನಾವು ಉತಾರು ಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆ ಕೆಲಸವನ್ನು ದಯ ಮಾಡಿ ತಾವು ಮಾಡಿದ್ದಾದರೆ, ಪ್ರತಿಯೊಂದು ಹಳ್ಳಿಯೊಳಗೆ ಕೂಡ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ತಾವು ಪಹಣಿಗಳನ್ನು ಪಡೆದು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ನಾವು ಗ್ರಾಮ ಪಂಚಾಯತ್ ಮಟ್ಟದಲ್ಲಿ ಕೂಡ ಪಡೆದುಕೊಳ್ಳಬಹುದು. ಈ ರೀತಿ ಚಿಂತನೆ ಮಾಡಿದರೆ ಬಹುಶಃ ಶಾಶ್ವತವಾಗಿ ಈ ಸಮಸ್ಯೆ ಬಗೆಹರಿಯುತ್ತದೆ. ಅದರ ಬಗ್ಗೆ ದಯಮಾಡಿ ಗಮನ ಹರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಿಂದ ಪಹಣಿ ತಿದ್ದುಪಡಿಯಾಗಿಲ್ಲ, ಪ್ರಾಯೋಗಿಕವಾಗಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ತೆಗೆದುಕೊಂಡಿದ್ದಾರೆ. ಆದರೆ ಬೆಳಗಾವಿ ಮತ್ತು ಬೀದರ್ ಜಿಲ್ಲೆಯಲ್ಲಿ ಹೇಳುವವರು ಕೇಳುವವರಿಲ್ಲ.

ಅಧ್ಯಕ್ಷರು : ಸನ್ಮಾನ್ಯ ಯಡಿಯೂರಪ್ಪನವರೇ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ತಮ್ಮ ಸ್ಥಾನದಲ್ಲಿ ಕುಳಿತು ಕೊಳ್ಳಿ. ಇಲ್ಲವೆಂದರೆ ನಾವು ಬೇರೆ ವ್ಯವಸ್ಥೆಯನ್ನು ಮಾಡುತ್ತೇವೆ. ದಯವಿಟ್ಟು

ತಾವು ಸಹಕಾರ ಮಾಡಬೇಕು ಏಕೆಂದರೆ ಇಲ್ಲಿ ಇದುವರೆಗೂ ಸ್ಟೂಲ್ ಹಾಕಿ ಕುಳಿತುಕೊಳ್ಳುವುದು ನಡೆದಿಲ್ಲ ಅದಕೋಸ್ಕರ ಹೇಳುವುದೇನೆಂದರೆ ಕೈಮುಗಿದು ಕೇಳಿಕೊಳ್ಳುತ್ತೇನೆ, ದಯಮಾಡಿ ಸಹಕಾರ ಮಾಡಿ.

(ಸನ್ಮಾನ್ಯ ಯಡಿಯೂರಪ್ಪನವರು ಬಾವಿಯಲ್ಲಿಯೇ ಸ್ಟೂಲೊಂದನ್ನು ಒದಗಿಸುವಂತೆ ಮನವಿ ಮಾಡಿದರು)

ಅಧ್ಯಕ್ಷರು : ಸ್ಟೂಲ್ ಹಾಕಿಕೊಡುವ ಪದ್ಧತಿ ಇಲ್ಲ, ಈಗ ಹೊಸದಾಗಿ ಆ ಪದ್ಧತಿಯನ್ನು ಮಾಡುವುದಕ್ಕೆ ಆಗುತ್ತದೆಯೇ? ಮಾಜಿ ಅಧ್ಯಕ್ಷರಾದಂಥಹ ರಮೇಶ್ ಕುಮಾರ್‌ರವರೇ, ಹೇಳಿ.

ಶ್ರೀ ಕೆ.ಆರ್ ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಒಬ್ಬ ಮಾಜಿ ಮುಖ್ಯಮಂತ್ರಿಯವರನ್ನು ಅಷ್ಟೊತ್ತು ಅಲ್ಲಿ ಕೂರಿಸಿ, ಇಷ್ಟೊತ್ತು ಕಲಾಪ ನಡೆಸಿದ್ದು ನನ್ನ ಪ್ರಕಾರ ಸರಿಯಿಲ್ಲ. ಅಧಿಕಾರ ಯಾರಿಗೂ ಶಾಶ್ವತವಲ್ಲ. Parliamentary Affairs Minister ಒಂದು Statement ಮಾಡಿ, ನಿಮ್ಮ ವಿಚಾರ ಏನಿದೆ, ಅದಕ್ಕೆ ನಾವು ಉತ್ತರ ಕೊಡುತ್ತೇವೆ, ದಯಮಾಡಿ ಸಹಕರಿಸಿ ಎಂದು ಹೇಳುವುದು ಬಿಟ್ಟು, elderly person ಅನ್ನು ಮೂಲೆಯಲ್ಲಿ ಕೂರಿಸಿ ನಾವು ಇಷ್ಟೊತ್ತು ಕಲಾಪವನ್ನು ನಡೆಸಿದ್ದೇವೆ.

ಅಧ್ಯಕ್ಷರು : ಸಂಸದೀಯ ವ್ಯವಹಾರ ಸಚಿವರೆ, ಇದಕ್ಕೆ ಏನು ಹೇಳುತ್ತೀರಿ ಎಂದು ಹೇಳಿ

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಆಗಲೇ ಹೋಗಿ ಮಾತನಾಡಿಸಿ ಬಂದಿದ್ದೇನೆ, request ಮಾಡಿ ಬಂದಿದ್ದೇನೆ. I give the Suggestions

ಅಧ್ಯಕ್ಷರು : ನೀವು ಒಳ್ಳೆಯ ಒಗ್ಗರಣೆ ಕೊಡುತ್ತೀರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಜಯಚಂದ್ರರವರೆ, ನೀವು ಒಂದು Statement ಮಾಡಿ.

ಅಧ್ಯಕ್ಷರು : ಬಿ.ಆರ್.ಪಾಟೀಲ್ ತಾವು ಹೇಳುವುದು ಬೇಡ

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾವು ಈ ವಿಷಯದಲ್ಲಿ ತಮಗೆ ಒಂದು ಅಪೀಲ್ ಮಾಡುತ್ತೇನೆ. ತಾವು ಸಭಾದ್ಯಕ್ಷರಾಗಿ ಐದು ನಿಮಿಷ ಸಭೆಯನ್ನು ಮುಂದೂಡಿ, ಸಭಾನಾಯಕರನ್ನು ಕರೆಸಿ ಮಾತನಾಡಿ, ತಾವೇ ಈ ಒಂದು ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದು ಉತ್ತಮ ಎಂದು ಅನಿಸುತ್ತದೆ.

ಅಧ್ಯಕ್ಷರು : ಜಯಚಂದ್ರರವರೆ, ತಾವು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಯಡಿಯೂರಪ್ಪನವರು ಇವತ್ತು ಈ ಸರ್ಕಾರದ ಕಾರ್ಯಕ್ರಮದ ವಿಚಾರದಲ್ಲಿ ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಕಳೆದ 25 ದಿವಸದಿಂದ ಕೂಡ ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ತಮ್ಮ ಹತ್ತಿರ ಕೂಡ ಚರ್ಚೆಯನ್ನು ಮಾಡಿದ್ದೇನೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೂಡ ಚರ್ಚೆ ಮಾಡಿದ್ದೇನೆ ಮಾಜಿ ಮುಖ್ಯ ಮಂತ್ರಿಗಳಾಗಿದ್ದವರು ಈ ರೀತಿಯಾಗಿ ಒಂದು ಕಾರ್ಯಕ್ರಮಕ್ಕೆ ಒತ್ತಾಯ ಮಾಡುವುದು ಮತ್ತು ಅಹೋರಾತ್ರಿ ಧರಣಿ ಮಾಡುತ್ತಿರುವುದು ಸಾಧುವಲ್ಲ ವೆನ್ನುವ ದೃಷ್ಟಿಯಿಂದ ಅವರನ್ನು ಭೇಟಿ ಮಾಡಬೇಕೆನ್ನುವ ಇಚ್ಛೆಯನ್ನು ಕೂಡ ನಾನು ವ್ಯಕ್ತಪಡಿಸಿದೆ. ನಾನು ಅವರಿಗೆ ಅವರ ಹತ್ತಿರ ಬರುತ್ತೇನೆಂದು ವರ್ತ ಮಾನ ಕೊಟ್ಟಾಗ, ಅವರು ಬರುವುದು ಬೇಡ, ನಾವು ಧರಣಿಯನ್ನು ಮುಂದು ವರೆಸುತ್ತೇವೆನ್ನುವ ಮಾತನ್ನು ಹೇಳಿದಾಗ ನಾನು ಸುಮ್ಮನಿರಬೇಕಾಯಿತು. ಇವತ್ತು ಸದನದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿ ರುವಂತಹ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾಗಿದ್ದಂಥವರು ಸದನದ ಕಲಾಪ ನಡೆಯುವಂತಹ ಸಂದರ್ಭದಲ್ಲಿ ಬಾವಿಯಲ್ಲಿ ಕುಳಿತು ಧರಣಿ ಮಾಡು ವುದು ಸಾಧುವಲ್ಲ ಹಾಗೂ ಯಾವುದೇ ಸಂಪ್ರದಾಯದ ಒಳಗೆ ಬರುವುದಿಲ್ಲ. ಇಲ್ಲಿ ಬಹಳ ಮುಖ್ಯವಾಗಿ ಯಾವ ಹಂತದಲ್ಲಿ ವ್ಯತ್ಯಾಸ ಬಂದಿದೆ ಎಂದು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅವರು ನಿಯಮ 60ರ ಅಡಿಯಲ್ಲಿ ಶಾದಿಭಾಗ್ಯ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿದ್ದಾರೆ.

ಅಧ್ಯಕ್ಷರು : ಒಂದೊಂದಾಗಿ ಯಾರ್ಯಾರು ಕೇಳಿದ್ದಾರೆಂದು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ : ಶಾದಿಭಾಗ್ಯ ಎಂದು ಯಾವ ಯೋಜನೆಯೂ ಇಲ್ಲ ಏಕೆಂದರೆ ಅವರು ಅಧಿಕೃತವಾಗಿ ನೋಟಿಸ್‌ನಲ್ಲಿ ಶಾದಿಭಾಗ್ಯ ಎಂದು ಕೊಟ್ಟಿರುವಂತಹ ಹಿನ್ನೆಲೆಯಲ್ಲಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿ ಬಂತು ಈ ಯೋಜನೆ ಬಗ್ಗೆ ಹಿಂದಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದರು.

ಅಧ್ಯಕ್ಷರು : ಈಗ ಮುಕ್ತವಾದಂತಹ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ : ನಾನು ಅದನ್ನು ಹೇಳುತ್ತಲೇ ಇದ್ದೇನೆ. ಅದರ ಬಗ್ಗೆ ನಾನು ಆಗಲೂ ಕೂಡ ಹೇಳಿದ್ದೇನೆ ಮಾನ್ಯ ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ಬಂದು, ಆ ವಿಷಯದ ಬಗ್ಗೆ ಚರ್ಚೆ ಮಾಡಿ. ನೀವು ಈ ವಿಚಾರವನ್ನು ನಿಯಮ 60ರಲ್ಲಿ ಕೇಳಿದ್ದೀರಿ, ನಿಯಮ 69ರಲ್ಲಿ ಆಗಲಿ, ಯಾವುದೇ ರೀತಿಯಲ್ಲಿ ಸದನದ ಗಮನಕ್ಕೆ ತರುವುದಕ್ಕೆ ಅವಕಾಶ ಇದೆ, ದಯಮಾಡಿ ಪ್ರಸ್ತಾಪ ಮಾಡಿ ಎಂದು ಹೇಳಿದ್ದೇನೆ ಆದರೆ ನಾನು ಇಲ್ಲಿ ವಿನಂತಿನ ಮಾಡಿಕೊಳ್ಳುವುದೇನೆಂದರೆ, ಬಜೆಟ್‌ನಲ್ಲಿ ಒಂದು ಯೋಜನೆ announce ಬಗ್ಗೆ ಆಕ್ಷೇಪ ಎತ್ತಿ ಇದು ಹೀಗೇ ಆಗಬೇಕೆನ್ನುವ, ಹೇಳುವುದು ಅಷ್ಟು ಸುಲಭವಲ್ಲ. ಇದನ್ನು ಬೇರೆ ವರ್ಗದವರಿಗೆ ವಿಸ್ತರಣೆ ಮಾಡಬಾರದು ಎನ್ನುವುದು ಸರ್ಕಾರದ ಅಭಿಪ್ರಾಯವಲ್ಲ. ಇದು Minorities Departmentಗೆ ಕೊಟ್ಟಿರುವಂತಹ. ಆ ವರ್ಗದವರಿಗೆ ಸೀಮಿತವಾಗಿರುವಂತಹ, ಹಣದಲ್ಲಿ ತೆಗೆದುಕೊಂಡಿರುವಂತಹ ಯೋಜನೆ. ಅದು ಸಂವಿಧಾನಬದ್ಧವಾಗಿರುವಂತಹ ಒಂದು ಯೋಜನೆ. ಹಾಗಾಗಿ ಬೇರೆ ವರ್ಗದವರಿಗೂ ವಿಸ್ತರಣೆ ಮಾಡಬೇಕೆನ್ನುವುದು ಸರ್ಕಾರದ ಇಚ್ಛೆ ಇದೆ.

ಅಧ್ಯಕ್ಷರು : ನೀವು Merit ಮೇಲೆ ಹೋಗಬೇಡಿ

ಶ್ರೀ ಟಿ.ಬಿ.ಜಯಚಂದ್ರ : ಅದನ್ನು ಯಾವ ರೀತಿ ಮಾಡಬೇಕೆನ್ನುವುದರ ಬಗ್ಗೆ ಸರ್ಕಾರ ನಿರ್ಧಾರ ಮಾಡುತ್ತದೆ. ನಾವು ಅದರಿಂದ ಹಿಂದೆ ಸರಿ

ದಿಲ್ಲ. ನಮಗೆ ಕೂಡ ಅದರ ಕಡೆ ಗಮನ ಇದೆ. ಹಾಗಾಗಿ ದಯಮಾಡಿ ಸದನ ನಡೆಯುವಂತಹ ಸಂದರ್ಭದಲ್ಲಿ ಆ ಕಾರ್ಯಕ್ರಮ ಹೀಗೇ ಆಗಬೇಕೆಂದು ಒತ್ತಾಯ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ನಾವು ಮುಕ್ತ ಮನಸ್ಸಿನಿಂದ ಇದ್ದೇವೆ, ಮೊದಲು ನೀವು ಚರ್ಚೆ ಮಾಡೋಣ ಎಂದು ವಿನಂತಿ ಮಾಡಿಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ : ನಾನು ಅವರಿಗೆ ಹೇಳುತ್ತೇನೆ. ನಾನು ಹೇಳುವುದೇನೆಂದರೆ ದಯಮಾಡಿ ತಾವು ಬಂದು ಸದನದ ಕಲಾಪದಲ್ಲಿ ಭಾಗ ವಹಿಸಬೇಕು. ತಾವು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಡುತ್ತೀರಿ, ಅವುಗಳನ್ನು ಸ್ವೀಕಾರ ಮಾಡುವುದಕ್ಕೆ ತಯಾರಿದ್ದೇವೆ ಆದುದರಿಂದ ತಾವು ದಯಮಾಡಿ ಬಂದು ತಮ್ಮ ಆಸನದಲ್ಲಿ ಕುಳಿತು ಚರ್ಚೆ ಮಾಡಬೇಕೆಂದು ನಾನು ತಮ್ಮ ಮುಖೇನ ಮಾನ್ಯ ಯಡಿಯೂರಪ್ಪನವರಿಗೆ ವಿನಂತಿಯನ್ನು ಮಾಡುತ್ತೇನೆ.

ಸಭಾಧ್ಯಕ್ಷರು : ಆಯಿತು.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ದಯವಿಟ್ಟು ಎಲ್ಲರ ವಿನಂತಿ ಇದೆ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಒಂದು Issue ಏನಿದೆ. ಇವತ್ತು ಏನು ಹೊಸದಾಗಿ ಮಾನ್ಯ ಯಡಿಯೂರಪ್ಪನವರು ಧರಣಿ ಯನ್ನು ಮಾಡುತ್ತಿಲ್ಲ. ಈಗಾಗಲೇ ಇದನ್ನು ಮುಂದುವರೆಸಿಕೊಂಡು ಬಂದಿ ದ್ದಾರೆ. ಇದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ, Parliımentery Affairs Minister ಕೂಡ ಮಾತನಾಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದ್ದಾರೆ. ಈಗಲೂ ಕೂಡ ಕಾಲ ಮೀರಿಲ್ಲ, ಇವತ್ತೂ ಕೂಡ ಮಾತುಕತೆಯ ಮುಖಾಂತರ ಬಗೆಹರಿಸಿಕೊಂಡು ಇದಕ್ಕೆ ಇತಿಶ್ರೀ ಹಾಡಿದರೆ ಒಳ್ಳೆಯದೆಂದು

ನಾನು ಮತ್ತೊಮ್ಮೆ ವಿನಂತಿ ಮಾಡುತ್ತೇನೆ. ತಾವು ದಯಮಾಡಿ ಸಭೆಯನ್ನು ಐದು ನಿಮಿಷಗಳ ಮುಂದೂಡಿ.

ಅಧ್ಯಕ್ಷರು : ಆಗಲ್ಲ, ಬೇಡ ಸಾಕು

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ರೀತಿ ಎಷ್ಟು ಸಾರಿ ಆಗಿಲ್ಲ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಸದನದ ನಿಯಮಾವಳಿಯನ್ನು ಮೀರಿ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಉಮೇಶ್ ಕತ್ತಿಯವರೆ, ಕೇಳಿ.

(ಗೊಂದಲ)

ಅಧ್ಯಕ್ಷರು : ಇದನ್ನು Assembly ಎಂದು ತಿಳಿದುಕೊಂಡಿದ್ದೀರೊ? ಏನೆಂದು ತಿಳಿದುಕೊಂಡಿದ್ದೀರಿ, ಎಲ್ಲರೂ ಎದ್ದು ನಿಂತುಕೊಂಡು ಮಾತನಾಡುತ್ತೀರಿ, ಏನಿದು? ಕುಳಿತಿಕೊಳ್ಳಿ. ಮಾನ್ಯ ಉಮೇಶ್ ಕತ್ತಿಯವರೆ ಕೇಳಿ.

ಶ್ರೀ ವಿ ಉಮೇಶ್ ಕತ್ತಿ : ಮಾನ್ಯ ಅಧ್ಯಕ್ಷರೆ, ತಾವು ಸಭೆಯನ್ನು ಸ್ವಲ್ಪ ಸಮಯ ಮುಂದೂಡಿ.

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರೆ, ಉತ್ತರ ಹೇಳಿ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್ · ತಮ್ಮ ಕಷ್ಟ ಏನೆಂಬುದು ಗೊತ್ತಾಗುತ್ತದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಪರವಾಗಿ ಮಾನ್ಯ ಕಾನೂನು ಸಚಿವರು ಮಾನ್ಯ ಯಡಿಯೂರಪ್ಪನವರಿಗೆ ಮನವಿ ಮಾಡಿಕೊಂಡಿದ್ದಾರೆ. ಮಾನ್ಯ ಯಡಿಯೂರಪ್ಪನವರೂ ಸಹ ಈ

ಸದನದಲ್ಲಿ ಪ್ರತಿಪಕ್ಷದ ನಾಯಕರಾಗಿ, ಮುಖ್ಯಮಂತ್ರಿಗಳಾಗಿ ಬಹಳ ಜವಾಬ್ದಾರಿಯಿಂದ ಕೆಲಸ ಮಾಡಿದಂತಹವರು. ಸದನದ ಕಲಾಪಗಳ ಬಗ್ಗೆ ಜನರು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ನಾವೆಲ್ಲರೂ ನಮ್ರತೆಯಿಂದ ಕೈ ಜೋಡಿಸಿ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ ದಯಮಾಡಿ ಎಲ್ಲರೂ ಅವರವರ ಸೀಟಿಗೆ ಬರಲಿ, ಆಮೇಲೆ ಸರ್ಕಾರ ಅವರಿಗೆ ಏನು ಬೇಕೋ ಅದನ್ನು ಹೇಳಲು ಚರ್ಚೆಗೆ ಅವಕಾಶ ಕೊಡುತ್ತಾರೆ, ನಂತರ ಉತ್ತರ ಕೊಡುತ್ತಾರೆ. ದಯಮಾಡಿ ಮಾನ್ಯ ಯಡಿಯೂರಪ್ಪನವರು ತಮ್ಮ ವೈಯಕ್ತಿಕ ಪ್ರತಿಷ್ಠೆಯ ಕಾರಣಕ್ಕೆ ಸದನದ ಕಲಾಪಗಳಿಗೆ ಅಡ್ಡ ಬರಬಾರದು. ಅವರು ಹಿರಿಯರಿದ್ದಾರೆ, ಅವರಿಗೆ ನಾವೆಲ್ಲರೂ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಉಮೇಶ್ ಕತ್ತಿಯವರೆ, ತಾವು ಕೇಳಿ.

ಶ್ರೀ ವಿ.ಉಮೇಶ್ ಕತ್ತಿ : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಪಹಣಿಗಳ ತೊಂದರೆಯಿಂದ ಕಳೆದ 2 ವರ್ಷಗಳಲ್ಲಿ ಮರ್ಡರ್‌ಗಳು ಆಗುತ್ತಿವೆ.

(ಗೊಂದಲ)

ಅಧ್ಯಕ್ಷರು : ತಮಗೆ ಯಾವ ಪ್ರಶ್ನೆಗೆ ಉತ್ತರ ಬೇಕೋ ಅದನ್ನು ಸರಿಯಾಗಿ ಕೇಳಿ

ಶ್ರೀ ವಿ.ಉಮೇಶ್ ಕತ್ತಿ : ವಿಶೇಷವಾಗಿ ಜಿಲ್ಲಾವಾರು ಹಂಚಿಕೆ ಮಾಡಿ, ಇಲ್ಲೇ ಮಡುವುದಕ್ಕೆ ಅಧಿಕಾರ ಕೊಡಲಿ.

(ಗೊಂದಲ)

ಶ್ರೀ ಕೆ ಆರ್.ರಮೇಶ್ ಕುಮಾರ್ : ಮಾನ್ಯ ಯಡಿಯೂರಪ್ಪನವರು ಆಗಿನಿಂದಲೂ ಬಾವಿಯಲ್ಲಿ ಧರಣಿ ಕುಳಿತುಕೊಂಡಿದ್ದಾರೆ. ಮಾನ್ಯ ಬಸವರಾಜ ಬೊಮ್ಮಾಯಿಯವರೆ, ತಾವು ಬಂದು appeal ಮಾಡಿಕೊಳ್ಳಿ, ತಾವು ಅಷ್ಟು ಮಾಡುವುದಕ್ಕೆ ಆಗುವುದಿಲ್ಲವೇ? you are all his colleagues

(ಈ ಹಂತದಲ್ಲಿ ಶ್ರೀ ಬಸವರಾಜ ಬೊಮ್ಮಾಯಿ ಶ್ರೀ ಪಚ್.ಡಿ.ರೇವಣ್ಣ ಮತ್ತು ಶ್ರೀ ಜಗದೀಶ್ ಶೆಟ್ಟರ್, ಶ್ರೀ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ಇನ್ನಿತರ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಕುಳಿತ್ತಿದ್ದ ಮಾನ್ಯ ಯಡಿಯೂರಪ್ಪನವರ ಬಳಿ ಕುಳಿತು ಮಾತನಾಡುತ್ತಿದ್ದರು)

ಶ್ರೀ ಸಿ.ಟಿ.ರವಿ . ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಕಾನೂನು ಸಚಿವರು ಶಾದಿ ಭಾಗ್ಯ ಯೋಜನೆಯೇ ಇಲ್ಲವೆಂದು ಅಭೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಇದು ನಮಗೆ ಗೊಂದಲವಾಗಿದೆ.

ಅಧ್ಯಕ್ಷರು : ಈಗ ಆಗುವುದಿಲ್ಲ, ಆಮೇಲೆ ಮಾತನಾಡೋಣ. ತಾವು ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ · ಧರಣಿ ಬಗ್ಗೆಯೂ ಮಾತನಾಡುತ್ತಾರೆ ಪ್ರಶ್ನೆಯನ್ನೂ ಕೇಳುತ್ತಿದ್ದಾರೆ. ಇಲ್ಲಿ ಇನ್ನೊಬ್ಬರು ಗ್ರಾಮ ಪಂಚಾಯತ್‌ನಲ್ಲಿ ಏನು ಮಾಡುಕೂಡುತ್ತೀರೆಂದು ಪ್ರಶ್ನೆ ಕೇಳಿದ್ದಾರೆ. ಅದನ್ನು ಹೇಳುವುದಕ್ಕೆ ಹೋದರೆ, ಇನ್ನು ಮುಖ್ಯ ಪ್ರಶ್ನೆ ಕೇಳಿರುವುದೇ ಮುಗಿದಿಲ್ಲ, ಉಪ ಪ್ರಶ್ನೆ ಅವರು ಕೇಳುತ್ತಿದ್ದಾರೆ ಅವರು ಕೇಳಿರುವುದಕ್ಕೆ ಉತ್ತರ ಕೊಡಲ್ಲಾ? ಇವರು ಕೇಳಿರುವುದಕ್ಕೆ ಉತ್ತರ ಕೊಟ್ಟಿದ್ದೇನೆ. ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ತಮಗೆ ಅರ್ಥವಾಗಿದೆಯೆಂದು ಅಂದುಕೊಂಡಿದ್ದೇನೆ. ನಾವು ಜಿಲ್ಲಾವಾರು ಮಾಡಿ ಕೊಡುತ್ತಿದ್ದೇವೆ, ತದನಂತರ ತುಮಕೂರು ಮತ್ತು ಕೋಲಾರದಲ್ಲಿ ತೆಗೆದು ಕೊಂಡಿದ್ದೇವೆ. ಈಗಾಗಲೇ ಅದನ್ನು ಮಾಡಿದ್ದೇವೆಂದು ಹೇಳಿದ್ದೇನೆ, ಸದ್ಯದಲ್ಲಿ ಆ result ಬರುತ್ತಿದೆ ಅದು ಇನ್ನೂ ಸರಿ ಹೋಗಿಲ್ಲ. ಅದನ್ನು ಪರಿಶೀಲಿಸಿ ಎಲ್ಲಾ ಕಡೆಗಳಲ್ಲೂ ದೋಷ ನಿವಾರಣೆ ಮಾಡಿ, ಎಲ್ಲರಿಗೂ ಪಹಣಿ ಸಿಗುವ ರೀತಿಯಲ್ಲಿ ದೋಷ ನಿವಾರಣೆ ಮಾಡಿ ಕೊಡುತ್ತೇವೆಂದು ಹೇಳುತ್ತಿದ್ದೇನೆ.

ಶ್ರೀ ವೈ ಎಸ್.ವಿ.ದತ್ತಾ · ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಅವರ ಪಾಡಿಗೆ ಅವರು ಉತ್ತರ ಕೊಡುತ್ತಿದ್ದಾರೆ. ಇಲ್ಲಿ ಏನೋ ಸಂಧಾನ ನಡೆಯುತ್ತಿದೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ಬಿ.ಎಸ್ ಯಡಿಯೂರಪ್ಪನವರು ಸದನದ ಬಾವಿಯಲ್ಲಿ ಧರಣಿಗೆ ಕುಳಿತ್ತಿದ್ದರು ಇವರ ಬಳಿ ಇನ್ನಿತರ ಸದಸ್ಯರು ಕುಳಿತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷರೆ, ಸಬೆಯನ್ನು 10 ನಿಮಿಷ adjourn ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರು ಶಿವಮೊಗ್ಗ ದವರಾಗಿದ್ದಾರೆ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಹೇಳಿದಂತೆ ಕುಳಿತು ಚರ್ಚೆ ಮಾಡಿದರೆ ಒಂದು ನಿಮಿಷದಲ್ಲಿ ಬಗೆಹರಿಸುವ ಕೆಲಸ ಮಾಡ ಬಹುದು. ಈ ರೀತಿ ಮಾಡಿದರೆ ಹೇಗೆ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, Question Hour ಆದಮೇಲೆ ನನ್ನ ಕೊಠಡಿಗೆ ಕರೆದು ಮಾತನಾಡುತ್ತೇನೆ. ತಾವೆಲ್ಲರೂ ಕುಳಿತುಕೊಳ್ಳಿ, Please ಎಲ್ಲರೂ ನಿಮ್ಮ ಸೀಟಿಗೆ ಹೋಗಿ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಅರ್ಧಗಂಟೆ ಸದನವನ್ನು ಮುಂದಕ್ಕೆ ಹಾಕಿ. House is not in order

ಶ್ರೀ ಕೆ.ಜೆ.ಬೋಪಯ್ಯ : 5 ನಿಮಿಷ ಮುಂದಕ್ಕೆ ಹಾಕಿ ಸರ್.

ಅಧ್ಯಕ್ಷರು : ನಾವು ಮಾಡಿರುವ ಬಿ.ಪಿ.ಎಲ್ ಕಾರ್ಡು ನೀವು ಕೊಡಲಿಲ್ಲ. ನಾವು ಕೊಟ್ಟಿರುವುದನ್ನು ಕಿತ್ತುಕೊಂಡಿರಿ. Please, ಎಲ್ಲರೂ ನಿಮ್ಮ ನಿಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ.

ಶ್ರೀ ಉಮೇಶ್ ವಿ ಕತ್ತಿ . ಅರ್ಧಗಂಟೆ ಮುಂದಕ್ಕೆ ಹಾಕಿ ಸರ್. ಸಂಧಾನ ಮಾಡಿ ಸರ್ ಇದು ಆಗುತ್ತಿಲ್ಲ

ಅಧ್ಯಕ್ಷರು : ಕತ್ತಿಯವರೆ, ಉತ್ತರ ಸರಿಯಾಗಿ ಬರುವುದಿಲ್ಲ. ಆಯಿತು, ಆಮೇಲೆ ಮಾಡೋಣ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಉಮೇಶ್ ವಿ ಕತ್ತಿ : ಇವರು ಮುಂದಕ್ಕೆ ಹಾಕುವುದಿಲ್ಲ, ಇದು ಆಗಿವುದಿಲ್ಲ.

(ಗೊಂದಲ)

ಅಧ್ಯಕ್ಷರು : ಇದು ಆಗುವುದಿಲ್ಲ, ನಾಳೆ ನೀವು ಮಾಡುತ್ತೀರಿ. Discussion ಇದೆ ನೀವು 5 ನಿಮಿಷ ಮುಂದಕ್ಕೆ ಹಾಕಿ ಎಂದು ಹೇಳುತ್ತೀರಿ, ಚರ್ಚೆ ಒಂದು ಗಂಟೆಯವರೆಗೆ ಹೋಗುತ್ತದೆ ಅದು ನಿಮಗೆ ಗೊತ್ತಾ? ಇನ್ನೂ ವಿಷಯಗಳು ಇವೆ. ಇನ್ನು 3–4 ಪ್ರಶ್ನೆಗಳು ಇವೆ ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ. ರಾಜು ಅಲಗೂರ ಪ್ರಶ್ನೆ ಕೇಳಿ.

ಶ್ರೀ ವಿ ಶ್ರೀನಿವಾಸ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಮೂಲ ಸಮಸ್ಯೆ ಏನು ಎನ್ನುವುದು ಅರ್ಧವಾಗಿದೆ, ಅದಕ್ಕೊಂದು Software development ಮಾಡುತ್ತಿದ್ದೇವೆ. ತುಮಕೂರು ಮತ್ತು ಕೋಲಾರದ್ದು ಏನು ಮೂಲಭೂತ ಸಮಸ್ಯೆಗಳು ಇವೆ ಅವುಗಳು ಪಹಣಿಯಲ್ಲಿ ಏನು ಬರುತ್ತಿದೆ, ಕೈಪಿಡಿಯಿಂದ ಬರಹತಕ್ಕಂಥ ಆ ಲೋಪದೋಷಗಳು ಏನು ಆಗಿವೆ, ಅವುಗಳನ್ನು ನಾವು ಸರಿಪಡಿಸಿಕೊಡುತ್ತೇವೆ.

ಅಧ್ಯಕ್ಷರು : ಆಯಿತು, ಎಲ್ಲರೂ ಕುಳಿತುಕೊಳ್ಳಿ. ಉಮೇಶ್ ಕತ್ತಿಯವರೆ, ನಿಮಗೆ ಏನು ಉತ್ತರ ಬೇಕು ಹೇಳಿ. ಇದು ಒಳ್ಳೆಯ ಕತೆ ಆಯಿತು.

ಶ್ರೀ ಉಮೇಶ್ ವಿ ಕತ್ತಿ : ಮಾನ್ಯ ಅಧ್ಯಕ್ಷರೆ, ಕೋಲಾರ ಮತ್ತು ತುಮಕೂರು ಬೆಳಗಾಂ ಜಿಲ್ಲೆಯ ತರಹ ಅಲ್ಲ. ತುಮಕೂರು ಜಿಲ್ಲೆ ನೀರಾವರಿ ಜಿಲ್ಲೆ ಅಲ್ಲ ಬೆಳಗಾಂ ಜಿಲ್ಲೆಯಲ್ಲಿ 7 ನದಿಗಳು ಹರಿಯುತ್ತಿವೆ. ಪಹಣಿಯಿಂದ ಮರ್ಡರ್‌ಗಳು ಆಗುತ್ತಿವೆ. ಅದಕ್ಕಾಗಿ ಸರಿಪಡಿಸಿ ಎಂದು ನಾನು ಒತ್ತಾಯ

ಮಾಡುತ್ತಿರುವುದು. 10 ಎಕರೆ ಬರುವಲ್ಲಿ 8 ಎಕರೆ ಪಹಣಿಯಲ್ಲಿ ಬರುತ್ತಿದೆ ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ಸರಿಯಾಗಿ ಪಹಣಿ ಬರುತ್ತಿಲ್ಲ ಅದನ್ನು ಆದಷ್ಟು ಬೇಗನೆ ಕೊಡಸಿ. ಇಲ್ಲಿ ಜಮೀನಿನ ಕಿಮ್ಮತ್ತು ಒಂದು ಎಕರೆಗೆ 50 ಲಕ್ಷ ರೂ.ಗಳು ಇದೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ನಾನು ಹೇಳುವುದು ಅವರಿಗೆ ಅರ್ಥವಾಗುತ್ತಿಲ್ಲ. ಎಲ್ಲಾ defects ಗಳನ್ನು ಸರಿಪಡಿಸುತ್ತೇವೆ. ಅದಕ್ಕಾಗಿ ಸ್ವಲ್ಪ ಸಮಯ ಬೇಕಾಗುತ್ತದೆ. ನೀವು ಗ್ರಾಮ ಪಂಚಾಯಿತಿ ಲೆವೆಲ್‌ದನ್ನು ಪ್ರಶ್ನೆ ಮಾಡಿದ್ದೀರಿ. ಅಲ್ಲಿ ಬೇಕಾದಷ್ಟು ಕಂಪ್ಯೂಟರ್‌ಗಳನ್ನು ಕೊಟ್ಟು ಅದನ್ನು ಸಾಲ್ವ್ ಮಾಡಿಕೊಡುತ್ತೇವೆ. ದಯಮಾಡಿ ಸ್ವಲ್ಪ Co-operative ಮಾಡಬೇಕು.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಬಗ್ಗೆ ಒಂದು ರಿಕ್ವೆಸ್ಟ್ ಮಾಡಿ ಬಿಡುತ್ತೇನೆ. ಏಕೋ ಸದನ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಎಲ್ಲರೂ ಅವರವರ ಪಾಡಿಗೆ ಅವರು ಇದ್ದಾರೆ. ನಾನು ಮಾನ್ಯ ಸಭಾ ನಾಯಕರಿಗೂ ಮನವಿಯನ್ನು ಮಾಡುತ್ತೇನೆ. ಮಾನ್ಯ ಯಡಿಯೂರಪ್ಪನವರು ನಮ್ಮೆಲ್ಲರಿಗಿಂತಲೂ ದೊಡ್ಡವರು ಇದ್ದಾರೆ, ಅನುಭವ ಇದೆ. ಈ ಶಾದಿಭಾಗ್ಯ ಯೋಜನೆ ಎನ್ನತಕ್ಕಂಥದ್ದು, ಬಿದಾಯಿ ಎಂದು ಆಯವ್ಯಯದಲ್ಲಿ ಮಂಡನೆ ಮಾಡಬೇಕಾದರೆ 5 ಕೋಟಿ ರೂ.ಗಳನ್ನು ಇಟ್ಟಿರತಕ್ಕಂಥದ್ದನ್ನು ನಾನು ಕೂಡ ಅದನ್ನು ಗಮನಿಸಿದ್ದೇನೆ. ಇದು 1000 ಜನರಿಗೆ ಕೊಡತಕ್ಕಂಥ ಒಂದು ಕಾರ್ಯಕ್ರಮ ಅಷ್ಟೇ ಯಡಿಯೂರಪ್ಪನವರು ಹೇಳಿದ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಸರ್ಕಾರ ಮನಸ್ಸು ಮಾಡಿ ಎಲ್ಲಾ ಸಮಾಜಗಳಿಗೆ ಮುಂದೆವರೆಸುವುದರ ಬಗ್ಗೆ ಹೇಳಿಕೆ ಯನ್ನು ಕೊಟ್ಟಿದ್ದಾರೆ. ಈಗಾಗಲೇ 24 ದಿವಸ ಬೆಂಗಳೂರಿನ ಮಹಾತ್ಮಾ ಗಾಂಧಿಯ ಪ್ರತಿಮೆಯ ಹತ್ತಿರ ಧರಿಣಿ ನಡೆಸಿದ್ದಾರೆ. ಇವತ್ತು ಒಂದು ಒಳ್ಳೆಯ ಉದ್ದೇಶದಿಂದ ಬೆಳಗಾಂನಲ್ಲಿ ಅಧಿವೇಶನ ಏನು ನಡೆಯುತ್ತಿದೆ ಹಿಂದೆ ಅವರೂ ಸಹ ಇಲ್ಲಿ ಅಧಿವೇಶನ ನಡೆಯಬೇಕೆಂದು ಹೇಳಿದವರಲ್ಲಿ ಒಬ್ಬರು

ಕಾರಣಕರ್ತರು ಇದ್ದಾರೆ ಇವತ್ತು ಮಾಧ್ಯಮಗಳ ಸ್ನೇಹಿತರುಗಳು ಬರೆದಿದ್ದಾರೆ. ಈ ಬಾರಿಯಾದರೂ ಸಹ 10 ದಿವಸ ಕಾಲ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಪರಿಣಾಮಕಾರಿಯಾಗಿ ಚರ್ಚೆ ಆಗಲಿ, ಕಳೆದ ಮೂರು ಅಧಿವೇಶನಗಳು ಯಾವುದೇ ರೀತಿಯ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲತಕ್ಕಂಥದ್ದರಲ್ಲಿ ಸದನದ ಕಲಾಪಗಳು ಆಗಲಿಲ್ಲ ಎನ್ನುವುದರ ಬಗ್ಗೆ ಮಾಧ್ಯಮಗಳು ಪ್ರಸ್ತಾಪ ಮಾಡಿ ಬರೆದ್ದಾರೆ ಆದ್ದರಿಂದ ಹಿರಿಯರಾದ ಮಾನ್ಯ ಯಡಿಯೂರಪ್ಪನವರಿಗೆ ನಾನು ಮನವಿಯನ್ನು ಮಾಡುತ್ತೇನೆ. ನಿಮ್ಮ ಹೋರಾಟದ ಬಗ್ಗೆ ಚರ್ಚೆ ಮಾಡಲಿಕ್ಕೆ ಸದನದಲ್ಲಿ ಹಲವಾರು ರೀತಿಯ ಅವಕಾಶಗಳು ಇವೆ ಆದ್ದರಿಂದ ಇವತ್ತು ನಾವೆಲ್ಲರೂ ಈ ಸದನ ನಡೆಯ ಬೇಕಾದರೆ ನೀವು ಒಬ್ಬರು ಹಿರಿಯರಾಗಿ ಸದನದ ಬಾವಿಯಲ್ಲಿ ಕುಳಿತು ಕೊಳ್ಳತಕ್ಕಂಥದ್ದು ಎಲ್ಲೋ ಒಂದು ಕಡೆ ನಮ್ಮ ಮನಸ್ಸುಗಳಿಗೆ ಕಸಿವಿಸಿ ಆಗುತ್ತಿದೆ ಎನ್ನತಕ್ಕಂಥದ್ದನ್ನು ಅವರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಸಭಾ ನಾಯಕರಾದ ಮುಖ್ಯಮಂತ್ರಿಗಳಿಗೂ ಮನವಿಯನ್ನು ಮಾಡುತ್ತೇನೆ. ಇದರ ಬಗ್ಗೆ ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಆ ಚರ್ಚೆಗೆ ನಾವು ಸಮರ್ಪಕವಾಗಿ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ ಎನ್ನುವುದಕ್ಕೆ ಮನವಿ ಮಾಡಿ ಅವರು ಸದನದ ಕಲಾಪದಲ್ಲಿ ಭಾಗವಹಿಸುವುದಕ್ಕೆ ತಮ್ಮ ಕಡೆಯಿಂದ ಇನ್ನೂ ಒಂದು ಮನವಿಯನ್ನು ಮಾಡುವುದು ಸೂಕ್ತ ಎಂದು ಸಭಾಧ್ಯಕ್ಷರ ಮೂಲಕ ತಮ್ಮ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ನಾನೂ ನಿಮ್ಮ ಜೊತೆಯಲ್ಲಿ ಧ್ವನಿ ಗೂಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) . ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಮಾನ್ಯ ಸದಸ್ಯರುಗಳು ಮಾನ್ಯ ಯಡಿಯೂರಪ್ಪನವರಿಗೆ ಮನವಿಯನ್ನು ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಕರ್ನಾಟಕ ವಿದಾನಸಭೆಯಲ್ಲಿ ಬಹಳ ದೀರ್ಘಕಾಲದಿಂದ ಕೆಲಸ ಮಾಡಿರತಕ್ಕಂಥವರು. ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದಾರೆ, ನಾಯಕರಾಗಿ ಕೆಲಸ ಮಾಡಿದ್ದಾರೆ. ಉಪಮುಖ್ಯಮಂತ್ರಿ ಗಳಾಗಿ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಸಭಾ ನಡವಳಿಕೆ

ಗಳು ಮತ್ತು ನಿಯಮಾವಳಿಗಳು ಅವೆಲ್ಲವೂ ಕೂಡ ಕರಗತವಾಗಿದೆ. ಇವತ್ತು ನಾವು ಆ ಬಿದಾಮಿ ಎನ್ನತಕ್ಕಂಥ ಒಂದು ಕಾರ್ಯಕ್ರಮ ಏನಿದೆ ಈ ಕಾರ್ಯಕ್ರಮವನ್ನು ನಾನು ಜುಲೈ ತಿಂಗಳಲ್ಲಿ ಆಯವ್ಯಯವನ್ನು ಮಂಡಿಸಿದಾಗಲೇ ಅಲ್ಪಸಂಖ್ಯಾತರ ಹೆಣ್ಣು ಮಕ್ಕಳಿಗೆ ಮದುವೆಗಳಿಗೆ ಆರ್ಥಿಕ ನೆರವನ್ನು ಕೊಡುತ್ತೇವೆ ಎನ್ನತಕ್ಕಂಥದ್ದನ್ನು ನಾವು ಘೋಷಣೆಯನ್ನು ಮಾಡಿದ್ದೇವೆ ಇದೇ ಸದನದಲ್ಲಿ ಬಜೆಟ್ ಪಾಸಾಗಿದೆ. ಅಲ್ಪಸಂಖ್ಯಾತ ಹೆಣ್ಣು ಮಕ್ಕಳ ಮದುವೆಗೆ ಆರ್ಥಿಕ ಸಹಾಯವನ್ನು ಒದಗಿಸಲು ಹೊಸ ಯೋಜನೆಯನ್ನು ಆರಂಭಿಸಲಾಗುವುದು. ಬಿದಾಯಿ ಇದ್ದಕ್ಕಿದ್ದಂತೆ ಹೊಸದಾಗಿ ಘೋಷಣೆ ಮಾಡಿದ ಕಾರ್ಯಕ್ರಮ ಅಲ್ಲ. ಬಜೆಟ್‌ನಲ್ಲಿ ಘೋಷಣೆ ಮಾಡಿ ಬಜೆಟ್‌ನಲ್ಲಿ 20 ದಿವಸ ಕಾಲ ಚರ್ಚೆ ಆಗಿದೆ, ಇದೇ ಸದನ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದೆ. ಆ ಮೇಲೆ ಆ ಕಾರ್ಯಕ್ರಮವನ್ನು ಜಾರಿಗೆ ಮಾಡುವುದಕ್ಕಾಗಿ ನಾವು ಆದೇಶವನ್ನು ಹೊರಡಿಸಿದ್ದೇವೆ. ಆದೇಶ ಹೊರಡಿಸಿದ ಮೇಲೆ ಮಾನ್ಯ ಯಡಿಯೂರಪ್ಪನವರು ಇದನ್ನು ಎಲ್ಲರಿಗೂ ಕೊಡಬೇಕು. ಇದು ಅಲ್ಪಸಂಖ್ಯಾತರಿಗೆ ಇದ್ದಂಥ ಹಣ ಏನು ಬಜೆಟ್‌ನಲ್ಲಿ ಒದಗಿಸಿದ್ದೇವೆ ಅದರಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳಿರತಕ್ಕಂಥದ್ದು. ಇದನ್ನು ಎಲ್ಲಾ ಅಲ್ಪಸಂಖ್ಯಾತರ ಹೆಣ್ಣು ಮಕ್ಕಳಿಗೆ ಅನ್ವಯಿಸಲಾಗುವ ರೀತಿಯಲ್ಲಿ ಆದೇಶವನ್ನು ಹೊರಡಿಸಿದ್ದೇವೆ. ಇವರು ಎಲ್ಲರಿಗೂ ಮಾಡಬೇಕು, ಇದರಿಂದ ಸಮಾಜದಲ್ಲಿ ಅಶಾಂತಿ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾವು ಸಂವಿಧಾನದಲ್ಲಿ ಯಾರು ಅವಕಾಶಗಳಿಂದ ವಂಚಿತರಾಗಿರತಕ್ಕಂಥ ಜನ ಇದ್ದಾರೆ ಅವರಿಗೆ ಅವಕಾಶಗಳನ್ನು ಕೊಡಬೇಕು ಅವರೂ ಕೂಡ ಆರ್ಥಿಕವಾಗಿ ಸಾಮಾಜಿಕವಾಗಿ ಸಮಾಜದಲ್ಲಿ ಸ್ವಾಭಿಮಾನದಿಂದ ಗೌರವಯುತವಾಗಿ ಬದುಕಬೇಕು. ಯಾರು ಆರ್ಥಿಕ ಸಂಕಷ್ಟದಲ್ಲಿದ್ದಾರೆ ಅವರಿಗೆ ಸಹಾಯ ಮಾಡಬೇಕು ಎನ್ನತಕ್ಕಂಥದ್ದು ನಾವು ಸಂವಿಧಾನದಲ್ಲಿ ಒಪ್ಪಿಕೊಂಡಿರುವಂಥದ್ದು ಇದೆ ಅಲ್ಲ ಅದು ಸರಿಯಾದಂಥದ್ದು ಅಲ್ಲ ಎನ್ನತಕ್ಕಂಥದ್ದು ನನ್ನ ಭಾವನೆ. ಇವರು ಬೇರೆಯವರಿಗೂ ವಿಸ್ತರಿಸಬೇಕೆಂದು ಏನು ಒತ್ತಾಯವನ್ನು ಮಾಡುತ್ತಿದ್ದಾರೆ ಅದರ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ, ಈಗಾಗಲೇ ನವೆಂಬರ್ ತಿಂಗಳು ಮುಗಿದು

ಡಿಸೆಂಬರ್ ತಿಂಗಳಿಗೆ ಬಂದಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹಗಲು ರಾತ್ರಿ ಧರಣಿ ಕುಳಿತುಕೊಂಡ ಮೇಲೆ ನಾನು ಅನೇಕ ಸಾರಿ ಪತ್ರಿಕೆಗಳಲ್ಲಿ ಹೇಳಿದ್ದೇನೆ. ಮುಂದೆ ಇದರ ಬಗ್ಗೆ ನಾವು ಗಂಭೀರವಾಗಿ ಚಿಂತನೆ ಮಾಡುತ್ತೇವೆಂದು ಹೇಳಿದ್ದೇವೆ. ನಾನು ಈಗಲೂ ಹೇಳುತ್ತೇನೆ, ನಾವು ಯಾವುದೇ ಹರಕ್ಕೆ ಅಥವಾ ಪ್ರತಿಷ್ಠೆಗೆ ಬೀಳತಕ್ಕಂಥದ್ದು ಅಲ್ಲ ಯಾರೂ ಕೂಡ ಪ್ರತಿಷ್ಠೆಗೆ ಹೋಗಬೇಕಾದ ಅಗತ್ಯವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆಯಾಗಬೇಕು. ಚರ್ಚೆ ಮಾಡಿಕೊಡಲಿಕ್ಕೆ ಅವಕಾಶ ಮಾಡಿಕೊಡಿ, ನಮ್ಮದೇನೂ ತಕರಾರು ಇಲ್ಲ. ನಾವು ಸಮರ್ಪಕವಾಗಿ ಉತ್ತರ ಕೊಡತಕ್ಕಂಥದ್ದು, ಅವರಿಗೆ ಒಪ್ಪಿಸ ತಕ್ಕಂಥ ರೀತಿಯಲ್ಲಿ, ಅವರಿಗೆ Convince ಆಗುವ ರೀತಿಯಲ್ಲಿ ಉತ್ತರ ಕೊಡುವಂಥ ರೀತಿಯಲ್ಲಿ ನಾವು ಪ್ರಯತ್ನ ಮಾಡುತ್ತೇವೆ. ಸರ್ಕಾರದ ನಿಲುವೇನು ಎನ್ನುವುದನ್ನು ತಿಳಿಸುವ ಪ್ರಯತ್ನವನ್ನೂ ಮಾಡುತ್ತೇವೆ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಆದರೆ, ಇವರು ಇವತ್ತು ನಿಯಮ 60ರಡಿಯಲ್ಲಿ ಒಂದು notice ಕೊಟ್ಟು, ಅದೂ ಕೂಡ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಇವರೂ ಒಂದು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಮೊದಲನೇ ನಿಲುವಳಿ ಸೂಚನೆಗೆ Preliminary submission ಮಾಡುವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ ಮತ್ತು ಅದನ್ನು ಚರ್ಚೆ ಮಾಡುವುದಕ್ಕೆ ಕೂಡ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. Rule 69 ಗೆ Convert ಮಾಡಿ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ, ಕಬ್ಬು, ಭತ್ತ, ಹತ್ತಿ, ಜೋಳ, ಮೆಕ್ಕೆ ಜೋಳ ಇವುಗಳ ಬಗ್ಗೆ ಚರ್ಚೆ ಮಾಡಬೇಕು, ಬೆಲೆ ನಿಗದಿಯಾಗಬೇಕೆನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ನಿಯಮಾವಳಿ ಪ್ರಕಾರ ಒಂದು ದಿವಸಕ್ಕೆ ಒಂದು ನಿಲುವಳಿ ಸೂಚನೆಯನ್ನು ಮಾತ್ರ ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಎರಡು ನಿಲುವಳಿ ಸೂಚನೆಗಳನ್ನ ಒಂದೇ ದಿವಸದಲ್ಲಿ ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಒಂದು ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಂಡಿದ್ದೀರಿ. ಆದರೆ, ಇವರು ಏನು ನಿಲುವಳಿ ಸೂಚನೆ ಕೊಟ್ಟಿದ್ದಾರೆ,

ಅದು ಎರಡನೇ ನಿಲುವಳಿ ಸೂಚನೆಯಾಗಿರುತ್ತದೆ. ನಿಯಮಾವಳಿ ಪ್ರಕಾರವೇ ನೂರಕ್ಕೆ ನೂರರಷ್ಟು ಮಾಡಿ ಎಂದು ಹೇಳುವುದಿಲ್ಲ. ಅವರಿಗೆ ಚರ್ಚೆಗೆ ಅವ ಕಾಶ ಮಾಡಿಕೊಡಬೇಕೆಂದು ನಿಮಗೆ ಅನಿಸಿದರೆ ಮಾಡಿಕೊಡಿ. ಆ ಚರ್ಚೆ ಯಲ್ಲಿ ಭಾಗವಹಿಸಿ, ಅದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಾಗಿದೆ. ಮಾನ್ಯ ಯಡಿಯೂರಪ್ಪನವರಿಗೆ ನಾನು ಇಷ್ಟೇ ಹೇಳುತ್ತೇನೆ, ಸದನದಲ್ಲಿ ನೀವು ಹಿರಿಯ ಸದಸ್ಯರಿದ್ದೀರಿ, ಇದನ್ನು ಬಹಳ ಹರ ಮಡಿಕೊಂಡು ಸದನದೊಳಗೆ ಕುಳಿತುಕೊಂದು ಹೀಗೆಯೇ ಆಗಬೇಕು, ಇದೇ ತರಹ ಆಗಬೇಕೆಂದು ಹೇಳು ವುದು ಸಮಂಜಸವಾದುದಲ್ಲ. ಪ್ರಜಾಪ್ರಭುತ್ವವಾದಂಥ ರೀತಿಯಲ್ಲಿ ನಡೆಯ ತಕ್ಕಂಥದ್ದಲ್ಲ. ನಿಯಮಾವಳಿಗಳನ್ನು ನಾವೇ ಮಾಡಿಕೊಂಡಿದ್ದೇವೆ ಆ ನಿಯ ಮಾವಳಿಗಳ ಚೌಕಟ್ಟಿನಲ್ಲಿ ಕೆಲಸ ಮಾಡೋಣ. ನೀವು ಇದನ್ನು ಪ್ರಸ್ತಾಪ ಮಾಡಿ. ಚರ್ಚೆ ಮಾಡೋಣ, ಸರ್ಕಾರ ಉತ್ತರ ಕೊಡುತ್ತದೆ. ಈಗಾಗಲೇ ನೀವು ಮತ್ತೆ ಪ್ರಸ್ತಾಪಿಸುತ್ತೇನೆಂದು ಹೇಳಿದ್ದೀರಿ. ಈ ಕಾರ್ಯಕ್ರಮ ವನ್ನು ಈಗಲೇ ಎಲ್ಲರಿಗೂ ಅನ್ವಯಿಸಬೇಕೆಂದು ಹೇಳುತ್ತಿದ್ದೀರಿ. ಎಲ್ಲಾ ವರ್ಗದ ಜನರಿಗೂ ಅನ್ವಯಿಸಬೇಕೆನ್ನುವುದಾದರೆ ಬಜೆಟ್‌ನಲ್ಲಿ ಮತ್ತೆ ನಾವು allocation ಮಾಡಿಕೊಳ್ಳಬೇಕಾಗುತ್ತದೆ. ಈ ಬಜೆಟ್‌ನಲ್ಲಿ allocation ಮಾಡಿಕೊಳ್ಳಬೇಕಾ ಗುತ್ತದೆ. ಎಲ್ಲ Survey ಮಾಡಬೇಕಾಗುತ್ತದೆ. ಎಷ್ಟು ಹಣ ಬೇಕಾಗುತ್ತದೆಂದು ನೋಡಬೇಕಾಗುತ್ತದೆ. ಸಾಧಕ ಬಾಧಕಗಳನ್ನೆಲ್ಲ ಚರ್ಚೆ ಮಾಡಬೇಕಾಗುತ್ತದೆ. ಇವೆಲ್ಲ ಮಾಡದೇ, ಏಕದಂ ನಾವು ಒಪ್ಪಿಕೊಳ್ಳುತ್ತೇವೆಂದು ಹೇಳುವುದಕ್ಕಾಗು ವುದಿಲ್ಲ. ಒಂದು ಕಾರ್ಯಕ್ರಮ ಹೀಗೆಯೇ ಆಗಬೇಕು, ನಾವು ಹೇಳಿದ್ದನ್ನು ಆದೇಶ ಮಾಡಲೇಬೇಕೆಂದು ಒತ್ತಾಯ ಮಾಡುವುದು ಸರಿಯಲ್ಲ. ನಾನು, ಯಡಿಯೂರಪ್ಪನವರು, ಬಿ.ಆರ್.ಪಾಟೀಲರು 1983ರಲ್ಲಿ Assembly ಗೆ ಒಟ್ಟಿಗೇ ಬಂದವರು. 1983ರಲ್ಲಿ ಬಹಳ ಜನ ಇದ್ದೆವು. ನನಗೆ ಗೊತ್ತಿರುವ ಮಟ್ಟಿಗೆ, ಒಂದು ಕಾರ್ಯಕ್ರಮ ಅಥವಾ ನಿರೂಪಣೆ ಅಥವಾ ಘೋಷಣೆ ಮಾಡುವಾಗ ಈ ಕಾರ್ಯಕ್ರಮ ಆಗಲೇಬೇಕು, ಈ ಕಾರ್ಯಕ್ರಮ ಆದೇಶ ಆಗಲೇಬೇಕು, ಇಲ್ಲದಿದ್ದರೆ ನಾವು ಧರಣಿ ಮಾಡಿಯೇ ಮಾಡುತ್ತೇವೆ, ವಿಧಾನ ಸಭೆ ನಡೆಯುವುದಕ್ಕೆ ನಾನು ಬಿಡುವುದಿಲ್ಲ, ಆ ತರಹ ವಿರೋಧ ಪಕ್ಷದವರು

ಒತ್ತಾಯ ಮಾಡುವುದಿದೆಯಲ್ಲ ಅದು ಸಮಂಜಸವಲ್ಲವೆನ್ನುವುದು ನನ್ನ ಅಭಿಪ್ರಾಯ ನಾನು ಈಗಲೂ ಕೂಡ ಮಾನ್ಯ ಯಡಿಯೂರಪ್ಪನವರಿಗೆ ಮನವಿ ಮಾಡುತ್ತೇನೆ. ದಯಮಾಡಿ ಅವರು ಅವರ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಲಿ ಅವರು ಹಿರಿಯ ಸದಸ್ಯರಿದ್ದಾರೆ, ಮಾಜಿ ಮುಖ್ಯಮಂತ್ರಿ ಇದ್ದಾರೆ, ಬಹಳ ದೀರ್ಘಕಾಲ ಇಲ್ಲಿ ಕೆಲಸ ಮಾಡಿದವರಿದ್ದಾರೆ, ಅವರಿಗೆ ಅನುಭವವಿದೆ. ನಾವು ಈ ಕಾರ್ಯಕ್ರಮದ ಬಗ್ಗೆ ಮುಂದೆ ಗಂಭೀರವಾಗಿ ಚಿಂತನೆ ಮಾಡುತ್ತೇವೆ. ಚಿಂತನೆ ಮಾಡಿ, ಇದನ್ನು ಎಲ್ಲರಿಗೂ ಅನ್ವಯಿಸುವುದಕ್ಕೆ ಸಾಧ್ಯವಾದರೆ ಮಾಡ ತಕ್ಕಂಥ ಪ್ರಯತ್ನ ಮಾಡುತ್ತೇವೆ. ಆದುದರಿಂದ, ಮಾನ್ಯ ಯಡಿಯೂರಪ್ಪ ನವರು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕು. ಬೇಕಾದರೆ, ಈ ವಿಚಾರ ಪ್ರಸ್ತಾಪ ಮಾಡಲಿ. ಚರ್ಚೆ ಮಾಡೋಣ

ಶ್ರೀ ಆರ್.ಅಶೋಕ್ : Convince ಮಾಡಬೇಕೆನ್ನುವ ದೃಷ್ಟಿಯಿಂದ ಅವರು ಮಾತನಾಡಿದ್ದಲ್ಲ

(ಗೊಂದಲ)

ಶ್ರೀ ಆರ್ ಅಶೋಕ್ : ಇದೆಲ್ಲ ನಡೆಯುವುದಿಲ್ಲ. ಮಾತನಾಡುವುದಕ್ಕೆ ಬಿಡಿ

(ಗೊಂದಲ)

ಶ್ರೀ ಕೆ.ಜಿ ಬೋಪಯ್ಯ : ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಆರ್.ಅಶೋಕ್ : ನಾನು ಹೇಳಿದ್ದೇನೆಂದರೆ, ಅವರಿಗೆ Convince ಮಾಡುವುದು ಬಿಟ್ಟು, ಈ ಯೋಜನೆ ಏಕೆ ತಂದೆ ಎನ್ನುವ ಬಗ್ಗೆಯೇ ಹೇಳಿ ದ್ದಾರೆಯೇ ಹೊರತಾಗಿ Convince ಮಾಡುವಂಥ ಪ್ರಯತ್ನ ಆಗಲಿಲ್ಲ. ಸರ್ಕಾ ರದ ಕಡೆಯಿಂದ ಸರಿಯಾಗಿ ಆಗಲಿಲ್ಲವೆನ್ನುವುದನ್ನು ನಾನು ಹೇಳುತ್ತಿದ್ದೇ ನೆಯೇ ಹೊರತು ಗಲಾಟೆ ಮಾಡುವ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಆರ್ ಅಶೋಕ್ : ಒಬ್ಬ ಮಾಜಿ ಮುಖ್ಯಮಂತ್ರಿ ಧರಣಿ ಕುಳಿತ್ತಿದ್ದಾರೆ, ಅವರನ್ನು Convince ಮಾಡುವ ಪ್ರಯತ್ನ ಮಾಡದೆ ಇರುವುದು ಸರಿಯಲ್ಲ

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ಇದು ಜಾತೀಕರಣ ವ್ಯವಸ್ಥೆಯಾಗುತ್ತದೆ. ದಯವಿಟ್ಟು ಸದನ ಇದಕ್ಕೆ ಅವಕಾಶ ಮಾಡಿಕೊಡಬಾರದು. ಜಾತಿ ಮೇಲೆ ಅಲ್ಲ, ಪ್ರಜಾಪ್ರಭುತ್ವದಲ್ಲಿ ಸಂವಿಧಾನದಲ್ಲಿ ಕಾನೂನಿಗೆ ಮಾನ್ಯತೆ ಕೊಡಬೇಕು.

(ಗೊಂದಲ)

ಶ್ರೀ ಸಿ.ಟಿ. ರವಿ : ಸಂವಿಧಾನದಲ್ಲಿ ಹೇಳಿಬಿಟ್ಟಿದೆಯೇ? ಸಂವಿಧಾನದಲ್ಲಿ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂದು ಮಾಡುವುದಕ್ಕೆ ಹೇಳಿದೆಯೇ? ಆರ್ಥಿಕವಾಗಿ ದುರ್ಬಲರಾಗಿರುವವರೆಲ್ಲರಿಗೂ ಕೊಡುತ್ತೇವೆಂದು ಹೇಳಿ. ಸಾಮಾಜಿಕ ನ್ಯಾಯವಾಗಿ ಎಲ್ಲಾ ಬಡವರಿಗೆ ಕೊಡಿತ್ತೇವೆಂದು ಹೇಳಿ

(ಗೊಂದಲ)

ಶ್ರೀ ಸಿ.ಟಿ.ರವಿ : ಸಂವಿಧಾನದಲ್ಲಿ ಜಾತಿವಾರು ಕೊಡಬೇಕೆಂದು ಹೇಳಿದೆಯೇ?

(ಗೊಂದಲ)

ಶ್ರೀ ಸಿ.ಟಿ. ರವಿ : ಯಾವ ಸಂವಿಧಾನ ಹೇಳಿದೆ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಅಲಗೂರ್‌ರವರೆ, ಪ್ರಶ್ನೆ ಕೇಳಿ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ ಎಂದರೂ ಅದೇ ಕಥೆ ಹೇಳುತ್ತೀರಲ್ಲಾ?, ಅಲಗೂರ್‌ರವರೇ ತಾವು ಪ್ರಶ್ನೆ ಕೇಳಿ.

ಹೊಸ ತಾಲ್ಲೂಕಿನ ರಚನೆ

11(2) ಶ್ರೀ ರಾಜು ಅಲಗೂರು (ನಾಗಠಾಣ) . ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸ ತಾಲ್ಲೂಕುಗಳನ್ನು ರಚನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ. ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ಯಾವ ಮಾನ ದಂಡಗಳನ್ನು ಅನುಸರಿಸಲಾಗುತ್ತಿದೆ.

ಇ) ಚಡಚಣದಲ್ಲಿ ನಾಡ ಕಛೇರಿ/ಇತರೆ ಆಡಳಿತ ಕಛೇರಿಗಳು ಇರುವು ದರಿಂದ ಅದನ್ನು ತಾಲ್ಲೂಕನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ : ಇದ್ದಲ್ಲಿ. ತಾಲ್ಲೂಕನ್ನಾಗಿ ಮಾಡಲು ಇರುವ ತಾಂತ್ರಿಕ ತೊಂದರೆಯೇನು·

ಈ) ಚಡಚಣವನ್ನು ತಾಲ್ಲೂಕನ್ನಾಗಿ ಮಾಡಲು ಸರ್ಕಾರಕ್ಕೆ ಎಷ್ಟು ಸಮಯ ಬೇಕಾಗುವುದು?

ಶ್ರೀ ಎ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೌದು

ಆ) ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ಯಾವುದೇ ನಿರ್ದಿಷ್ಟವಾದ ಅಥವಾ ಅನುಸರಿಸಬಹುದಾದ ಮಾನದಂಡಗಳು ಇರುವುದಿಲ್ಲ. ಆದರೆ 1973 ನೇ ಸಾಲಿನಲ್ಲಿ ಶ್ರೀ ವಾಸುದೇವರಾವ್ ಆಯೋಗ 1984 ರಲ್ಲಿ ಶ್ರೀ ಟಿ.ಎಂ.ಹುಂಡ್ರೇಕರ್ ಸಮಿತಿ 1986 ರಲ್ಲಿ ಶ್ರೀ ಪಿ.ಸಿ.ಗದ್ದಿಗೌಡರ್ ಸಮಿತಿ ಹಾಗೂ 2007 ರಲ್ಲಿ ಶ್ರೀ ಎಂ.ಬಿ.ಪ್ರಕಾಶ್ ಸಮಿತಿಗಳು ಹೊಸ ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತವೆ. ಈ ಸಮಿತಿಗಳು